**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.**

**ಓ.ಎಸ್. ಸಂಖ್ಯೆ. 208/2018**

**ದಿನಾಂಕಃ 12ನೇ ಆಗಸ್ಟ್ 2024**

**ಅರ್ಜಿದಾರರು/ಪ್ರತಿವಾದಿಗಳುಃ** ಶ್ರೀ ಜಯರಾಜು ಮತ್ತು ಇನ್ನೊಬ್ಬರು

**ವಿರುದ್ಧ**

**ಎದುರುದಾರರು/ವಾದಿಃ** ಶ್ರೀಮತಿ ಗೀತಾ

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ವಾದಿಯ ವಿಚಾರಣೆಯನ್ನು ತಿರಸ್ಕರಿಸಬೇಕೆಂದು ಕೋರಿ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***20.09.2022*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | ***ಮಧ್ಯಂತರ ಅರ್ಜಿ ಸಂಖ್ಯೆಃ 6*** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | ***03.01.2023*** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***12.08.2024*** |

**ಮಧ್ಯಂತರ ಅರ್ಜಿ ಸಂಖ್ಯೆ: 6 ರ ಮೇಲಿನ ಆದೇಶ**

1ನೇ ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 6 ನ್ನು ಸಲ್ಲಿಸಿದ್ದು, ಅದರಲ್ಲಿ ನ್ಯಾಯಾಲಯವು ವಿವೇಚನಾಧಿಕಾರವನ್ನು ಬಳಸಿ ವಾದಿಯ ವಿಚಾರಣೆಯನ್ನು ತಿರಸ್ಕರಿಸಬೇಕು ಎಂಬುದಾಗಿ ಕೋರಿರುತ್ತಾರೆ.

**2.** ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಾದಿಯು ದಾವೆಯನ್ನು 1ನೇ ಪ್ರತಿವಾದಿಯಾದ ತನ್ನ ವಿರುದ್ಧ ಮತ್ತು ಎರಡನೇ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಸಹ ಸಲ್ಲಿಸಿರುತ್ತೇವೆ. ವಾದಿಯು ದಿನಾಂಕ 09/10/2019 ರಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಅನಂತರದಲ್ಲಿ ಪಾಟೀ ಸವಾಲಿಗೆ ವಾದಿಯು ಗೈರುಹಾಜರಾಗಿರುತ್ತಾರೆ. ಇದರಿಂದಾಗಿ ವಾದಿಗೆ ದಾವೆಯನ್ನು ನಡೆಸುವ ಬಗ್ಗೆ ಆಸಕ್ತಿ ಇರುವುದಿಲ್ಲ ಎಂಬುದಾಗಿ ತಿಳಿದುಬರುತ್ತದೆ. ಈ ಕಾರಣದಿಂದಾಗಿ ವಾದಿಯ ವಿಚಾರಣೆಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

**3.** ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ವಾದಿಯು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಯು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆ ಹೂಡಿರುವುದರಿಂದ ಪ್ರತಿವಾದಿ ಸಲ್ಲಿಸಿರುವ ಅರ್ಜಿ ಊರ್ಜಿತವಾದುದಲ್ಲ. ಉಳಿದಂತೆ ಅರ್ಜಿಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಅಲ್ಲಗಳೆಯಲಾಗಿರುತ್ತದೆ.. ವಾದಿಯು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುವುದು ಸತ್ಯವಾಗಿರುತ್ತದೆ.. ಪ್ರತಿವಾದಿಯರು ವಾದಿಯನ್ನು

ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುತ್ತಾರೆ. ಅಲ್ಲದೆ ಪ್ರತಿವಾದಿಗಳು ವಾದಿಯ ಮೇಲೆ ಆರೋಪ ಮಾಡುತ್ತಿರುತ್ತಾರೆ. ವಾದಿಯು ತನ್ನ ಸ್ವತ್ತನ್ನು ರಕ್ಷಿಸಿಕೊಳ್ಳಲು ಆಸಕ್ತಿವುಳ್ಳವರಾಗಿರುತ್ತಾರೆ ಮತ್ತು ಪಾಟಿ ಸವಾಲಿಗೆ ಒಳಪಡಲು ಸಹ ಸಿದ್ಧರಿರುತ್ತಾರೆ. ವಾದಿಯರರಿಗೆ ಉತ್ತಮವಾದ ದಾವೆಯಾಗಿದ್ದು ಪ್ರತಿವಾದಿಯರು ತೊಂದರೆಯನ್ನುಂಟು ಮಾಡುತ್ತಿರುವುದಲ್ಲದೆ ವಾದಿಯು ಖಾಸಗಿ ಕಂಪನಿಯ ನೌಕರನಾಗಿರುವುದನ್ನು ತಿಳಿದು ತೊಂದರೆ ನೀಡುತ್ತಿರುತ್ತಾರೆ. ಈ ಕಾರಣದಿಂದ ಅರ್ಜಿ ವಜಾಕರಿಸುವಂತೆ ಕೋರಿರುತ್ತಾರೆ.

4. ನ್ಯಾಯಾಲಯವು ಪ್ರತಿವಾದಿಯ ಅರ್ಜಿ ಮತ್ತು ವಾದಿಯ ತಕರಾರನ್ನು ಅಂಶಗಳನ್ನು ಪರಿಶೀಲಿಸಿ ನ್ಯಾಯಾಲಯದ ವಿವೇಚನೆಗೆ ಈ ಕೆಳಕಂಡ ಅಂಶಗಳ ಪ್ರಶ್ನೆ ಉದ್ಭವಿಸುತ್ತವೆ.

*1. ಪ್ರತಿವಾದಿಯು ಸಲ್ಲಿಸಿರುವ ಅರ್ಜಿ ಪುರಸ್ಕರಿಸಲು ಸಕಾರಣಗಳಿರುತ್ತವೆಯೇ ?*

*2. ಯಾವ ಆದೇಶ?*

5. ಅಂತಿಮವಾಗಿ ಉಭಯ ಪರ ವಕೀಲರ ಮಧ್ಯಂತರ ಅರ್ಜಿಯ ಸಂಬಂಧವಾಗಿ ಲಿಖಿತ ವಾದವನ್ನ ಸಲ್ಲಿಸಿರುತ್ತಾರೆ. ಅದರಂತೆ ಮೇಲ್ಕಂಡ ಅಂಶಗಳಿಗೆ ಕೆಳಕಂಡಂತೆ ಉತ್ತರಿಸಲಾಯಿತು.

ಅಂಶ 1ಃ ನಕಾರಾತ್ಮಕವಾಗಿ

ಅಂಶ 2 ಃ ಈ ಕೆಳಕಂಡ ಕಾರಣಗಳಿಂದಾಗಿ,

## ಕಾರಣಗಳು

**6.ಅಂಶ 1 ಃ** ವಾದಿಯು ಈ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುವುದಾಗಿ ಕಂಡುಬರುತ್ತದೆ. ಸದರಿ ದಾವೆಯಲ್ಲಿ 1ನೇ ವಾದಿಯು ಪಾಟೀ ಸವಾಲಿಗೆ ಹಾಜಾರಾಗದೆ ಇರುವ ಕಾರಣದಿಂದಾಗಿ ವಾದಿಯ ವಿಚಾರಣೆಯನ್ನು ತಿರಸ್ಕರಿಸುವಂತೆ ಕೋರಿರುವುದನ್ನು ಪರಿಶೀಲಿಸಲಾಗಿ ವಾದಿಯು ಅಧಿಕಾರ ಪತ್ರವನ್ನು ಪಡೆದವರಿಂದ ದಿನಾಂಕ 09/10/2019 ರಂದು ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ನಿಪಿ-1 ರಿಂದ ನಿಪಿ-4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ತದನಂತರ ದಿನಾಂಕ 12/04/2021 ರಂದು ಮುಂದುವರೆದ ಮುಖ್ಯ ವಿಚಾರಣೆ ಮಾಡಿಕೊಂಡು ನಿಪಿ- 5 ರಿಂದ ನಿಪಿ-9 ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿರುವುದಾಗಿ ನ್ಯಾಯಾಲಯಕ್ಕೆ ಆದೇಶದ ಪ್ರತಿಯಿಂದ ಕಂಡುಬರುತ್ತದೆ. ದಿನಾಂಕ 07/03/2022 ರಂದು ಪಿಡಬ್ಲ್ಯೂ-1 ಹಾಜಾರಾಗಿದ್ದಾಗ್ಯೂ ರಾಜಿಯಾಗುವ ಸಂಭವವಿರುವುದಾಗಿಯು ತಿಳಿಸಿ ದಿನಾಂಕ ಮುಂದೂಡಿರುವುದು ಕಂಡುಬರುತ್ತದೆ. ದಿನಾಂಕ 22/06/2022 ರಂದು ವಾದಿಯಾದ ಪಿಡಬ್ಲ್ಯೂ-1 ರವರು ಹಾಜರಿದ್ದು ಪ್ರತಿವಾದಿಗಳು ಗೈರುಹಾಜರಿರುವ ಕಾರಣ ಹಾಜಾರಾತಿಗಾಗಿ ಮುಂದೂಡಲ್ಪಟ್ಟಿರುತ್ತದೆ. ದಿನಾಂಕ 07/07/2022 ರಂದು ಪ್ರತಿವಾದಿಗಳು ಬೇರೆ ವಕೀಲರ ನೇಮಕಾತಿ ಸಂಬಂಧ ದಿನಾಂಕ ಕೋರಿರುವುದಾಗಿ ಕಂಡುಬರುತ್ತದೆ. ಹೀಗಿರುವಲ್ಲಿ ದಿನಾಂಕ 02/09/2022 ರಂದು ಪ್ರತಿವಾದಿಗಳು ಹಾಜಾರಾಗಿ ದಿನಾಂಕ 20/09/2022 ರಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವುದರಿಂದ ಪ್ರತಿವಾದಿಗಳು ಸಲ್ಲಿಸಿರುವ ಅರ್ಜಿ ಊರ್ಜಿತವಾದುದಲ್ಲ ಎಂಬುವುದಾಗಿ

ಪರಿಗಣಿಸಿ ಪ್ರಸ್ತುತ ದಾವೆಯನ್ನು ವಾದಿಯು ಸಲ್ಲಿಸಿದ್ದು ಸದರಿ ವಾದಿಯು ಆಸಕ್ತಿ ಹೊಂದಿಲ್ಲವೆಂದಾದಲ್ಲಿ ವಿಚಾರಣೆ ಮತ್ತು ದಾಖಲಾತಿಗಳನ್ನು ಸಲ್ಲಿಸುವ ಸಂದರ್ಭವಿರುತ್ತಿರುವುದಿಲ್ಲ ಎಂಬುದಾಗಿ ನ್ಯಾಯಾಲಯ ಅಭಿಪ್ರಾಯ ಪಟ್ಟು ಪ್ರತಿವಾದಿಗಳು ದಾವೆಯನ್ನು ಶೀಘ್ರವಾಗಿ ಇತ್ಯರ್ಥ ಪಡಿಸಿಕೊಳ್ಳುವ ಆಸಕ್ತಿ ಹೊಂದಿದ್ದೇ ಆದಲ್ಲಿ ಪಿಡಬ್ಲ್ಯೂ-1 ರವರ ವಿಚಾರಣೆಯ ದಿನಾಂಕದಂದು ಪಾಟೀ ಸವಾಲು ಮಾಡಬಹುದಿತ್ತು. ಅದರ ಬದಲಾಗಿ ದಿನಾಂಕ ಕೋರಿರುವುದನ್ನ ಆಧರಿಸಿ ಅಂಶ ಒಂದನ್ನು ಪುಸ್ಕರಿಸಲು ಸಕಾರಣಗಳಿರುವುದಿಲ್ಲ ಎಂಬುದಾಗಿ ನ್ಯಾಯಾಲಯ ಅಭಿಪ್ರಾಯ ಪಟ್ಟು **ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.**

7. **ಅಂಶ 2 ಃ** ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

**ಆದೇಶ**

*1ನೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 6 ಸಿವಿಲ್ ಪ್ರಕ್ರಿಯಾ ಸಂಹಿತೆ 151 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

*ಅದರಂತೆ ದಾವೆಯನ್ನು ಪಿಡಬ್ಲ್ಯೂ-1ರವರ ಪಾಟೀ ಸವಾಲಿಗೆ ದಿನಾಂಕ ನಿಗದಿಗೊಳಿಸಿ ಪಿಡಬ್ಲ್ಯೂ-1 ರವರು ಖುದ್ದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರತಿವಾದಿಗಳು ಪಾಟೀ ಸವಾಲು ಮಾಡುವುದಕ್ಕೆ ದಿನಾಂಕವನ್ನು ನಿಗದಿಗೊಳಿಸಲಾಯಿತು.*

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 12 **ನೇ ಆಗಸ್ಟ್** 2024 ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**ಆದೇಶ**

*1ನೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ: 6 ಸಿವಿಲ್ ಪ್ರಕ್ರಿಯಾ ಸಂಹಿತೆ 151 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಯಿತು.*

*ಅದರಂತೆ ದಾವೆಯನ್ನು ಪಿಡಬ್ಲ್ಯೂ-1ರವರ ಪಾಟೀ ಸವಾಲಿಗೆ ದಿನಾಂಕ ನಿಗದಿಗೊಳಿಸಿ ಪಿಡಬ್ಲ್ಯೂ-1 ರವರು ಖುದ್ದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರತಿವಾದಿಗಳು ಪಾಟೀ ಸವಾಲು ಮಾಡುವುದಕ್ಕೆ ದಿನಾಂಕವನ್ನು ನಿಗದಿಗೊಳಿಸಲಾಯಿತು.*

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

For cross of PW-1 by 21.08.2024

Prl Civil Judge & JMFC.,
Kollegal.